ಮಾಡಬೇಕು ಆದರೂ ಕೂಡ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ ಅದನ್ನು ಯಾವ ತರಹ ಕಂಟ್ರೋಲ್ ಮಾಡಬೇಕೋ, ಆ ರೀತಿ ಕಂಟ್ರೋಲ್ ಮಾಡುವಂತಹ ಕೆಲಸಕ್ಕೆ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಸಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆಯ ಮೂಲಕ ಅವುಗಳನ್ನು ಹಿಡಿದು ಅಡವಿಗೆ ವರ್ಗಾಯಿಸಲಿಕ್ಕೆ ಸಾಧ್ಯವಾಗುತ್ತದೆಯೇ? ಈ ದಿಸೆಯಲ್ಲಿ ಮಾನ್ಯ ಕೃಷಿ ಸಚಿವರು ಅಥವಾ ಸರ್ಕಾರದವರು ತೀವ್ರವಾಗಿ ಗಮನವನ್ನು ಹರಿಸಬೇಕು

ಅಧ್ಯಕ್ಷರು ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೂ ಮತ್ತೆ ನಿಮ್ಮದೇನ್ರಿ? ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಸಿ ಸಿ ಪಾಟೀಲ್ ಮಾನ್ಯ ಅಧ್ಯಕ್ಷರೆ, ಅಲ್ಲಿ ಸಾವಿರಾರು ಎಕರೆಗಳು ಹಾಳಾಗಿದೆ ಮೂರು ವರ್ಷದ ಬರಗಾಲದ ನಂತರ ಸ್ವಲ್ಪ ಬೀಜ ಬಿತ್ತಿದ್ದೇವೆ ಅದು ಹಾಳಾಗಿದೆ ಆದುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ ಅದಕ್ಕೆ ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ

ಅಧ್ಯಕ್ಷರು ಅದಕ್ಕೆ ಸರ್ಕಾರದವರು ಈಗಾಗಲೇ ಉತ್ತರ ಹೇಳಿದ್ದಾರೆ ತಾವು ದಯವಿಟ್ಟು ಕುಳಿತುಕೊಳ್ಳಿ ಈಗ ಅಂಗಾರರವರು ತಮ್ಮ ವಿಷಯ ಪ್ರಸ್ತಾಪಿಸಬೇಕು

16 ವಿಷಯ ಸುಳ್ಯ ಕ್ಷೇತ್ರದಲ್ಲಿ ಚಲಾವಣೆ ಆಗುತ್ತಿರುವ ಖೋಟಾ ನೋಟು ಪ್ರಕರಣದ ಬಗ್ಗೆ

ಶ್ರೀ ಎಸ್ ಅಂಗಾರ (ಸುಳ್ಯ) ಮಾನ್ಯ ಅಧ್ಯಕ್ಷರೆ, ನನ್ನ ಸುಳ್ಯ ಕ್ಷೇತ್ರದಲ್ಲಿ 1998 ಮೇ ತಿಂಗಳಿನಲ್ಲಿ ಸುಳ್ಯ ತಾಲ್ಲೂಕಿನ ಬೆಳ್ಳಾರಿಯ ಅಯ್ಯನ ಕಟ್ಟೆಯಲ್ಲಿ ಮೊಯಿನುದ್ದೀನ್ ಕುಂಜ್ಞಯವರ ಮನೆಯಲ್ಲಿ ಜೆರಾಕ್ಸ್ ಮೆಶಿನ್ ಸಿಕ್ಕಿ ಖೋಟಾ ನೋಟು ಪ್ರಕರಣವೊಂದು ಪತ್ತೆಯಾಯಿತು ಆ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಕೇರಳದ ಕಲ್ಲಿಕೋಟೆಯಲ್ಲಿ ಪ್ರಿಂಟಿಂಗ್ ಮೆಶಿನ್ ಕೂಡ ಪತ್ತೆ ಹಚ್ಚಿದ್ದಾರೆ ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಗಳು ಆ ಪ್ರಿಂಟಿಂಗ್ ಮೆಶಿನ್ ಅನ್ನು seize ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಆದರೆ ಅದರ ನಂತರ ತಾಲ್ಲೂಕಿನ ಬೇರೆ ಬೇರೆ ಕಡೆಗಳಿಂದ, ಕೇರಳದಿಂದ ಬರುವಂತಹ ಅನೇಕ ಜನರು ಬಂದು, ಬೇರೆ ಬೇರೆ ಕಾಲೋನಿಗಳಿಗೆ ಹೋಗಿ ದುಡ್ಡನ್ನು ಬಡ್ಡಿಗೆ ಕೊಡುವಂತಹ ಕೆಲಸ ನಡೆಯುತ್ತಿದೆ ಈ ರೀತಿಯಲ್ಲಿ ಕಳೆದ 4–5 ವರ್ಷಗಳಿಂದ ನಡೆಯುತ್ತಿದೆ ಮೊನ್ನೆ ಅಂದರೆ 23 7ಕ್ಕೆ ಗುತ್ತಿಗಾರ್‌ನಲ್ಲಿ ಕೂಡ ಈ ರೀತಿಯ ಒಂದು ಖೋಟಾ ನೋಟು ಪ್ರಕರಣ ಬೆಳಕಿಗೆ ಬಂದಿದೆ ಸಂಬಂಧಪಟ್ಟಂತಹ ಸುಮಾರು 7–8

ವ್ಯಕ್ತಿಗಳನ್ನು ಇಲಾಖಾಧಿಕಾರಿಗಳು ಪತ್ತೆ ಹಚ್ಚುವಂತಹ ಕೆಲಸವನ್ನು ಮಾಡಿದ್ದಾರೆ ಅದರ ಬಗ್ಗೆ ಆಕ್ಷನ್ ಕೂಡ ತೆಗೆದುಕೊಂಡಿದ್ದಾರೆ ಆದರೆ ಇಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ಅಲ್ಲಿ ಪ್ರತಿಯೊಬ್ಬ ಜನರೂ ಕೂಡ ತುಂಬಾ ಭಯಭೀತರಾಗಿದ್ದಾರೆ ಯಾವುದೇ ವ್ಯಕ್ತಿ ಕೂಲಿ ಕೆಲಸವನ್ನು ಮಾಡಿ ಸಂಬಳವನ್ನು ಪಡೆದುಕೊಳ್ಳುವಂತಹ ಸಮಯದಲ್ಲಿ, ಯಾವ ನೋಟು ಸಾಚಾ ಎಂದು ಕೂಲಿ ಕಾರ್ಮಿಕನಿಗೆ ಕೂಡ ಗೊತ್ತಾಗುವುದಿಲ್ಲ ಅಂತಹ ಒಂದು ಪರಿಸ್ಥಿತಿ ಅಲ್ಲಿದೆ ಸರ್ಕಾರ ಈ ಒಂದು ಖೋಟಾ ನೋಟಿಗೆ ಸಂಬಂಧಪಟ್ಟ ಹಾಗೆ ಅದನ್ನು ಪತ್ತೆ ಹಚ್ಚುವಲ್ಲಿ ಹಾಗೂ ತಡೆ ಹಿಡಿಯುವಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎನ್ನುವಂತಹ ಸ್ಪಷ್ಟವಾದಂತಹ ಉತ್ತರವನ್ನು ಸರ್ಕಾರ ಕೊಡಬೇಕೆಂದು ನಾನು ಈ ಸದನದಲ್ಲಿ ಕೇಳಬಯಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೇ,

ಶ್ರೀ ಬಿ ಎಸ್ ಯಡಿಯೂರಪ್ಪ ಹಣಕಾಸಿನ ಸಚಿವರು ಇಲ್ಲೇ ಇದ್ದಾರೆ

ಶ್ರೀ ಕೆ ಶ್ರೀನಿವಾಸಗೌಡ ಅವರ ಪರವಾಗಿ ನಾನೇ ರಿಪ್ಲೈ ಕೊಡುತ್ತಿದ್ದೇನೆ ರಿಪ್ಲೈ ರೆಡಿ ಇದೆ

ಶ್ರೀ ಬಿ ಎಸ್ ಯಡಿಯೂರಪ್ಪ ಹಣಕಾಸಿನ ಬಗ್ಗೆ ಅರ್ಧ ಸಚಿವರೇ ಉತ್ತರ ಕೊಡುತ್ತಾರೆಂದು ಅಂದುಕೊಂಡಿದ್ದೆ ಆದರೆ ಉತ್ತರ ರೆಡಿ ಇದೆ ಎಂದು ಹೇಳುತ್ತಿದ್ದೀರಿ ಆದ್ದರಿಂದ ತಾವೇ ಉತ್ತರ ಕೊಡಿ ಪರವಾಗಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಅದನ್ನು ಅವರು ನೋಡಿಲ್ಲ, ನಾನು ನೋಡುತ್ತಿದ್ದೇನೆ ಉತ್ತರ ಯಾರು ಹೇಳಿದರೂ ಕೂಡ ಅದು ಸರ್ಕಾರದ ಉತ್ತರವೇ ಆಗಿರುತ್ತದೆ

ಶ್ರೀ ಎಸ್ ರಾಜೇಂದ್ರನ್ ಖೊಟಾ ನೋಟು ಅಂದರೆ ಅದು finance minister ಗೆ ಸಂಬಂಧಪಟ್ಟಿದ್ದು ಅಲ್ಲವೇ?

ಶ್ರೀ ಕೆ ಶ್ರೀನಿವಾಸಗೌಡ ಅವರು ಖೋಟಾ ನೋಟಿನವರಲ್ಲ ಅವರು ನಿಜವಾದ ನೋಟುಗಳನ್ನು ಪ್ರಿಂಟ್ ಮಾಡುವಂತಹ ಇಲಾಖೆ ಜವಾಬ್ದಾರಿ ಹೊತ್ತಿರುವ ಉಪ ಮುಖ್ಯಮಂತ್ರಿಗಳು

ಶ್ರೀ ಎಸ್ ರಾಜೇಂದ್ರನ್ ಇದರ ಬಗ್ಗೆ experience ಇರುವಂತಹವರು ಇದಕ್ಕೆ ಉತ್ತರ ಕೊಡಬೇಕು

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಉಪ ಮುಖ್ಯಮಂತ್ರಿಗಳ ಪರವಾಗಿ ನಾನೇ ಉತ್ತರ ಕೊಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, ಸುಳ್ಯ ಕ್ಷೇತ್ರದಲ್ಲಿ ಈಗಾಗಲೇ ಐದು ಕೇಸುಗಳು ಸಿಕ್ಕಿವೆ ಅದರಲ್ಲಿ ದಿನಾಂಕ 26-5-1998ರಲ್ಲಿ ಸುಮಾರು 100 ರೂಪಾಯಿ ಮೌಲ್ಯದ 11 ಲಕ್ಷ 85 ಸಾವಿರ 800 ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ ಅದರಲ್ಲಿ 13 ಜನರನ್ನು ದಸ್ತಗಿರಿ ಮಾಡಲಾಗಿದೆ

ಅವರ ಹೆಸರುಗಳನ್ನು ಬೇಕಾದರೆ ಓದುತ್ತೇನೆ ಎರಡನೆಯದಾಗಿ, ಒಂದು ಸಾರಿ ಗ್ರಾಮ ಪಂಚಾಯಿಯ ಕಾರ್ಯದರ್ಶಿಯವರು ಹನವನ್ನು ಕಟ್ಟುವಾಗ ಅದರಲ್ಲಿ 500 ರೂಪಾಯಿ ಒಂದು ನೋಟು ಸಿಕ್ಕಿದೆ ಅದು ಯಾರದ್ದು ಎಂದು ಟ್ರೇಸ್ ಆಗದೆ, ಅದು (ಸಿ) ರಿಪೋರ್ಟ್ ಆಗಿದೆ ಮೂರನೆಯದಾಗಿ, ದಿನಾಂಕ 16–10–2000ರಲ್ಲಿ ಸುಳ್ಯ ಪೇಟೆಯಲ್ಲಿರುವ ಪ್ರಭು ಅಂಡ್ ಕೋ ಪೆಟ್ರೋಲ್ ಪಂಪ್‌ನಲ್ಲಿ ಜಗನ್ನಾಥ ಯಾನೆ ಅರುಣ್ ಮತ್ತು ಅನಿಲ್‌ಕುಮಾರ್ ಎಂಬುವವರು ಪೆಟ್ರೋಲ್ ಪಂಪ್‌ನಲ್ಲಿ ಪೆಟ್ರೋಲ್ ಹಾಕಿಸಿ, 50 ಮುಖ ಬೆಲೆಯ 4 ಖೋಟಾ ನೋಟುಗಳನ್ನು ನೀಡಿ, ಚಲಾವಣೆಗೆ ಯತ್ನಿಸಿದ್ದನ್ನು ಫಿರ್ಯಾದಿ ಎಂ ಆರ್ ಬಾಲಕೃಷ್ಣ ಮ್ಯಾನೇಜರ್ ಇವರು ಪತ್ತೆ ಮಾಡಿ, ದೂರು ಸಲ್ಲಿಸಿದ್ದಾರೆ ಇದರಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ 50 ರೂಪಾಯಿ ಮುಖ ಬೆಲೆಯ ಒಟ್ಟು 1600 ಮೌಲ್ಯದ ಖೋಟಾ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ ಹಾಗೂ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು ಮಂಗಳೂರು ಸೆಷನ್ಸ್ ನ್ಯಾಯಾಲಯದಲ್ಲಿ ಇದರ ಕೇಸ್ ನಡೆಯುತ್ತಿದೆ ನಾಲ್ಕನೆಯದಾಗಿ, ದಿನಾಂಕ 23–7–2004ರಂದು ಗುತ್ತಿಗಾರು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣೆ ಸಂಘ, ನಿಯಮಿತ, ಗುತ್ತಿಗಾರು, ಸುಳ್ಯ ತಾಲ್ಲೂಕು ಇದರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಪುರುಷೋತ್ತಮ ಗೌಡ ಇವರು ಸುಬ್ರಮಣ್ಯ ರಾಣೆಗೆ ದೂರನ್ನು ಸಲ್ಲಿಸಿದ್ದಾರೆ ಇದರಲ್ಲಿ ಸದರಿ ರಬ್ಬರ್ ಸೊಸೈಟಿಯ ಸಾಲದ ಮರುಪಾವತಿ ಮಾಡುವಾಗ 47,500 ಮೌಲ್ಯದ ಖೋಟಾ ನೋಟುಗಳು ಇದೆ ಎಂದು ತಿಳಿಸಿದ್ದಾರೆ ಅದೇ ದಿನ ಗುತ್ತಿಗಾರು ಗ್ರಾಮದ ಸತ್ಯಶಂಕರ ಎಂಬುವವರು ಸುಬ್ರಮಣ್ಯ ರಾಣೆಗೆ ನೀಡಿದ ದೂರಿನಲ್ಲಿ ತಿಮ್ಮಪ್ಪಯ್ಯ ಇವರ ಮಗ ಪ್ರಶಾಂತ್ ಇವರು ತನಗೆ ಸಾಲದ ಬಾಬ್ತು ನೀಡಿದ ಹಣದಲ್ಲಿ 20,000 ಮೌಲ್ಯದ ಖೋಟಾ ನೋಟುಗಳು ಪತ್ತೆಯಾಗಿರುವುದಾಗಿ ತಿಳಿಸಿದ್ದರ ಮೇರೆಗೆ, ಸುಬ್ರಮಣ್ಯ ರಾಣೆಯಲ್ಲಿ ಪ್ರಕರಣ ದಾಖಲಾಗಿದೆ ತನಿಖೆ ವೇಳೆ ಎರಡು ಪ್ರಕರಣಗಳಲ್ಲಿ ಒಟ್ಟು 12 ಜನರನ್ನು ಬಂಧಿಸಲಾಗಿದೆ ಅದರಲ್ಲಿ ಸಾವಿರ ಮತ್ತು ಐನೂರು ಮುಖ ಬೆಲೆಯ ಒಟ್ಟು 77,000 ಮೌಲ್ಯದ ಖೋಟಾ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ ಇದರಿಂದ ಖೋಟಾ ನೋಟುಗಳ ಚಲಾವಣೆಗೆ ಉಪಯೋಗಿಸುತ್ತಿದ್ದ ಮೂರು ಕಾರುಗಳನ್ನು, ಆರು ಮೊಬೈಲ್ ಫೋನ್‌ಗಳು ಇತ್ಯಾದಿ ಸುಮಾರು 16 ಲಕ್ಷ ಬೆಲೆಯ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಆರೋಪಿತರ ಈ ಜಾಲವು ಸುಮಾರು 9 ಲಕ್ಷ 50 ಸಾವಿರ ಮೌಲ್ಯದ ಸಾವಿರ ರೂಪಾಯಿ ಮುಖಬೆಲೆಯ, ಐನೂರ ಮುಖಬೆಲೆಯ ಖೋಟಾ ನೋಟುಗಳನ್ನು ಚಲಾವಣೆ ಮಾಡಿರುವುದು ತನಿಖೆಯಿಂದ ತಿಳಿದು ಬಂದಿದೆ ಸುಮಾರು 12 ಜನರವನ್ನು ಬಂಧಿಸಿ, ಕ್ರಮವನ್ನು ಜರುಗಿಸಲಾಗುತ್ತಿದೆ ಎರಡೂ ಪ್ರಕರಣಗಳಲ್ಲೂ ಕೂಡ ಬಂಧಿತ ಆರೋಪಿಗಳನ್ನು ದಿನಾಂಕ 4–8–

2004ರವರೆಗೂ ಅಂದರೆ ನಿನ್ನೆಯವರೆಗೂ ಸಹ ನ್ಯಾಯಾಂಗ ಬಂಧನದಲ್ಲಿಡಲು ಆದೇಶವಾಗಿತ್ತು ನಿನ್ನೆ ಏನಾಯಿತು ಎಂದು ಇದುವರೆಗೂ ನಮಗೆ ವರದಿ ಬಂದಿಲ್ಲ ಹೀಗೆ ಒಟ್ಟಾರೆಯಾಗಿ ಐದು ಕೇಸ್‌ಗಳು ಇಲ್ಲಿ ದಾಖಲಾಗಿವೆ ಸುಳ್ಯ ಕ್ಷೇತ್ರದಲ್ಲಿ ಬಹಳಷ್ಟು ಖೋಟಾ ನೋಟು ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪಿಸಿದ್ದಾರೆ ಸಿ ಓ ಡಿ ಯಲ್ಲಿ ಕೌಂಟರ್‌ಫೀಟ್ ಕರೆನ್ಸಿ ಮತ್ತು ಆರ್ ಎಂ squad ಎಂಬುದೊಂದು ಇರುತ್ತದೆ ಅವರೂ ಕೂಡ ಇದನ್ನು parallel ಆಗಿ ತನಿಖೆ ಮಾಡುವಂತಹ ಅವಕಾಶ ಇದೆ ನಮ್ಮ ಪೊಲೀಸರೇ ಈಗ ಈ ಐದೂ ಕೇಸುಗಳನ್ನು ಡೀಲ್ ಮಾಡುತ್ತಿದ್ದಾರೆ ಇದಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ನೀವು ಬೇಕಾದರೆ ಇದನ್ನು ಸಿ ಓ ಡಿ ಗೆ ವಹಿಸಿ ಎಂದು ಹೇಳಿದರೂ ಕೂಡ ಸರ್ಕಾರ ಅದಕ್ಕೆ ಇಲ್ಲ ಎನ್ನುವುದಿಲ್ಲ ಇದನ್ನು ಸಿ ಓ ಡಿ ಗೆ ವಹಿಸಲು ಸರ್ಕಾರ ಸಿದ್ಧವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ

17 ವಿಷಯ ಹೊಸ ನಗರ ತಾಲ್ಲೂಕಿನ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯುವ ಬಗ್ಗೆ

ಶ್ರೀ ಹೆಚ್ ಹಾಲಪ್ಪ (ಹೊಸನಗರ) ಮಾನ್ಯ ಅಧ್ಯಕ್ಷರೆ, ಹೊಸ ನಗರ ತಾಲ್ಲೂಕಿನಲ್ಲಿ 5 ಕಾಲೇಜುಗಳಿವೆ ಅದರಲ್ಲಿ ಒಂದು ಕಾಲೇಜಿನಲ್ಲಿ ಮಾತ್ರ ಪಿ ಯು ಸಿ ಯಲ್ಲಿ ಸೈನ್ಸ್ ಸೆಕ್ಷನ್ ಇತ್ತು ಈಗ ಅದನ್ನೂ ಮುಚ್ಚಿದ್ದಾರೆ ಮುಚ್ಚುವುದಕ್ಕೆ ಲೆಕ್ಚರರ್ ಇಲ್ಲ ಎಂಬ ಕಾರಣ ಹೇಳುತ್ತಾರೆ ಆದರೆ ಈ ವರ್ಷ ಎಸ್ ಎಸ್ ಎಲ್ ಸಿ ಯಲ್ಲಿ 896 ಜನ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಅದರಲ್ಲಿ 319 ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಅವರು ಸೈನ್ಸ್ ತೆಗೆದುಕೊಂಡು ಓದಬೇಕೆಂದರೆ, ದೂರದ ಸಾಗರಕ್ಕೆ ಹೋಗಬೇಕು, ಶಿವಮೊಗ್ಗಕ್ಕೆ ಹೋಗಬೇಕು ಇಲ್ಲವೇ ಉಡುಪಿಗೆ ಹೋಗಬೇಕಾಗಿದೆ ಖಂಡಿತ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಇಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿ ಎಂದು ನಾನು ಎಲ್ಲಾ ಕಡೆ ಓಡಾಡಿದಾಗ, ಅದಕ್ಕೆ ಲೆಕ್ಚರರ್ ಇಲ್ಲವೆಂದು ಹೇಳಿದರು ಲೆಕ್ಚರರ್ ಅನ್ನು ನೀವು ತುಂಬಿಕೊಳ್ಳಿ ಎಂದರೆ, ಸರ್ಕಾರದ ಜಾರಿಯಲ್ಲಿರುವ ಮಿತವ್ಯಯ ಆದೇಶದ ಅಡಚಣೆಯಿಂದಾಗಿ ಆ ಸೈನ್ಸ್ ಸೆಕ್ಷನ್ ಓಪನ್ ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಈ ಮಿತವ್ಯಯ ಎಂಬುದು ಶಾಲಾ ಕಾಲೇಜುಗಳಿಗೂ ಅನ್ವಯವಾಗುತ್ತದೆಯೇ? ಇದು ಎಜ್ಯುಕೇಷನ್ ಡಿಪಾರ್ಟ್‌ಮೆಂಟಿಗೂ ಕೂಡ ಅನ್ವಯವಾಗುತ್ತದೆಯೇ? ಅಲ್ಲಿ ಶೇಕಡ 85ರಷ್ಟು ಮಾರ್ಕ್ಸ್ ತೆಗೆದವರು ಸುಮಾರು 25 ಜನ ಇದ್ದಾರೆ ಆ 25 ಜನ ವಿದ್ಯಾರ್ಥಿಗಳು ಎಲ್ಲಿ ಓದುವುದಕ್ಕೆ ಹೋಗಬೇಕು? ಅವರು ಸೈನ್ಸ್ ತೆಗೆದುಕೊಳ್ಳಬೇಕು ಎಂದರೆ, ಅವರು ಎಲ್ಲಿ ಓದಬೇಕು ಎಂಬ ಬಗ್ಗೆ ದಯವಿಟ್ಟು